## ಎನ್‌ಐಟಿಕೆ 23 ನೇ ಘಟಿಕೋತ್ಸವದಲ್ಲಿ 41 ಮಂದಿಗೆ ಚಿನ್ನದ ಪದಕ

# ಮಹತ್ವದ ಗುರಿಯತ್ತ ಹೆಜ್ಜೆ ಇಡಿ



**•ಸುರತ್ಕಲ್:** ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ್ ಭಾರತ್ 20147 ಮಹಾ ದಾಸಾಯಕ್ಕೆ ಪೂರಕವಾಗಿ ದೇಶದ ತಲಾ ಆದಾಯವನ್ನು 18000ಗಳಿಗೆ ಇರಿಸುವಂತಹ ಮಹತ್ವದ ಗುರಿಯತ್ತ ಯುವ ಸಮುದಾಯ ಹೆಜ್ಜೆ ಇಡಬೇಕಾಗಿದೆ ಎಂದು ವೋಲ್ವೋ ಗ್ರೂಪ್ ಆಫ್ ಇಂಡಿಯಾ ಇದರ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕ ಕಮಲ್ ಬಾಲಿ ಹೇಳಿದರು.

ಅವರು ಸುರತ್ಕಲ್ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ಇದರ 23ನೆಯ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸಾಧಕ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನಿಸಿ ಮಾತನಾಡಿದರು.

ದೇಶದಲ್ಲಿ ಜಿಡಿಪಿ ಏರುಗತಿಯಲ್ಲಿದ್ದು ತಲಾದಾಯವು ಏರು ಗತಿಯನ್ನು ಕಾಣಬೇಕಿದೆ. ಇದಕ್ಕೆ ಪ್ರಬಲ ಆರ್ಥಿಕ ವ್ಯವಸ್ಥೆ, ಪಾರದರ್ಶಕತೆ, ಶಿಸ್ತು ಹಾಗೂ ಗುಣಮಟ್ಟದ ಕಾರ್ಯ ಚಟುವಟಿಕೆ, ದೇಶದ ಮೇಲೆ ಅಪಾರ ಪ್ರೀತಿ ಇವುಗಳನ್ನೆಲ್ಲ ಒಂದಾಗಿಸಿಕೊಂಡು ಮುನ್ನಡೆದಾಗ 2047ರ ಗುರಿಯನ್ನು ಸಾಧ್ಯವಿದೆ. ವಿದ್ಯಾರ್ಥಿ ಸಮುದಾಯ ಮುಂದಿನ 20 ವರ್ಷಗಳನ್ನು ಸುವರ್ಣ ವರ್ಷ ಎಂಬುದಾಗಿ ತಿಳಿದುಕೊಂಡು ದೇಶದ ಏಳಿಗೆಗೆ ಕೈಜೋಡಿಸಬೇಕಿದೆ ಎಂದರು.

ಜಗತ್ತು ಇಂದು ಎ ಐ ತಂತ್ರಜ್ಞಾನ, ಶಕ್ತಿಯ ಉತ್ಪಾದನೆ, ತಾಂತ್ರಿಕತೆಯ ಮೇಲೆ ಅವಲಂಬನೆಗೆ ಒತ್ತು ನೀಡಿ ಮುನ್ನಡೆಯುತ್ತಿದ್ದು ಇದರ ಅವಕಾಶವನ್ನು ಭಾರತವು ಪಡೆದುಕೊಳ್ಳಬೇಕಿದೆ ಎಂದರು.

ಎನ್‌ಐಟಿಕೆ ನಿರ್ದೇಶಕ ಪ್ರೊಫೆಸರ್ ಬಿ. ರವಿ ಅವರು ಪ್ರಾಥಮಿಕವಾಗಿ ಮಾತನಾಡಿ, ಸಂಸ್ಥೆಯ ಸಾಧನೆಗಳನ್ನು ವಿವರಿಸಿದರು. 1995 ವಿದ್ಯಾರ್ಥಿಗಳಿಗೆ ಪದವಿ ಪ್ರದಾನಿಸಲಾಯಿತು. 935 ಬಿ. ಟೆಕ್, 641 ಎಂ. ಟೆಕ್, 23 ಸಂಶೋಧನಾ ವಿಭಾಗದ ಎಂ ಟೆಕ್, 66 ಎಂ ಸಿ ಎ, 69 ಎಂ ಬಿ ಎ, 68 ಎಂಎಸ್‌ಇ, 193 ಪಿಎಚ್‌ಡಿ ಪದವಿ, 41 ಸಾಧಕ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಲಾಯಿತು. ವೇದಿಕೆಯಲ್ಲಿ ವಿವಿಧ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

Hosa Digantha, Date:16/11/25, p. 08